ಶಾಲಾ ಶಿಕ್ಷಣ ಇಲಾಖೆ ..............................

ಸರಕಾರಿ ಶಿಕ್ಷಕರು, ಅಧಿಕಾರಿಗಳು, ಸಿಬ್ಬಂದಿಗಳ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲುಗಳ ಪ್ರಸ್ತಾವನೆಯನ್ನು ಸಲ್ಲಿಸುತ್ತಿರುವ ಇಲಾಖೆಯ ಕಾರ್ಯನಿರ್ವಾಹಕರಿಗೆ(caseworker)ಪ್ರತಿಯೊಬ್ಬರಿಗೆ ತಿಳಿಸುವುದೇನೆಂದರೆ...ಇತ್ತೀಚೆಗೆ ಕರ್ನಾಟಕ ರಾಜ್ಯ ಸರಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳ ಪಟ್ಟಿಯನ್ನು ತಮಗೆ ಕಳಿಸಲಾಗಿದ್ದು ಅದರಂತೆ ತಾವುಗಳು ಸರಿಯಾಗಿ ಈ ಪಟ್ಟಿಯಲ್ಲಿ ತಿಳಿಸಿದಂತೆ ಮಾನ್ಯತೆ ಪಡೆದ ಆಸ್ಪತ್ರೆಗಳಾಗಿದ್ದರೆ ಮಾತ್ರ ನಮ್ಮ ಇಲಾಖೆಗೆ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲುಗಳ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿದ್ದು.. ಒಂದು ವೇಳೆ ಕರ್ನಾಟಕ ರಾಜ್ಯ ಸರಕಾರ ಮಾನ್ಯತೆ ಪಡೆದ ಆಸ್ಪತ್ರೆಗಳ ಪಟ್ಟಿಯಲ್ಲಿ ಚಿಕಿತ್ಸೆ ಪಡೆದವರ ಆಸ್ಪತ್ರೆಯ ಹೆಸರು ಇಲ್ಲದಿದ್ದಲ್ಲಿ... ಅಂತ ವೈದ್ಯಕೀಯ ವೆಚ್ಚದ ಮರುಪಾವತಿ ಪ್ರಸ್ತಾವನೆಗಳನ್ನು ಮೊದಲು ಅವರ ವೈದ್ಯಕೀಯ ವೆಚ್ಚದ ಮರುಪಾವತಿ ಹಣವನ್ನು ನಿರ್ಧರಿಸಿ ದೃಢೀಕರಣ ಪತ್ರ ನೀಡಲು "ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಬೆಂಗಳೂರು" ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿ.. ತದನಂತರ ಅವರಿಂದ ವೈದ್ಯಕೀಯ ವೆಚ್ಚದ ಮರುಪಾವತಿ ಅರ್ಹತಾ ಮೊತ್ತ ನಿಗದಿಯಾದ ದೃಢೀಕರಣ ಪ್ರತಿ ಲಗತ್ತಿಸಿದ ನಂತರ ನಮ್ಮ ಇಲಾಖೆಗೆ ಸಲ್ಲಿಸಬೇಕಾಗಿ ತಮಗೆ ಮಾಹಿತಿಗಾಗಿ ತಿಳಿಸಲಾಗಿದೆ...

**ದಿನಾಂಕ**:01-01-2024

**ಕರ್ನಾಟಕಸರಕಾರ**

**ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ........................**

**ಸರಕಾರಿ ಅಧಿಕಾರಿ/ನೌಕರರಿಗೆ ಸಂಬಂಧಿಸಿದ ವೈದ್ಯಕೀಯ ವೆಚ್ಚ ಮರುಪಾವತಿ ಮಂಜೂರಾತಿಗಾಗಿ ತಯಾರಿಸುವ ಚೆಕ್ಲಿಸ್ಟ್.**

| | |
|---|---|
| 1 | **ನೌಕರರ ಹೆಸರು ಹಾಗೂ ವಿಳಾಸ :** |

| | | |
|---|---|---|
| 2 | ವೈದ್ಯಕೀಯ ಚಿಕತ್ಸೆ ಪಡೆದ ಆಸ್ಪತ್ರೆಯು ಮಾನ್ಯತೆ ಪಡೆದಿದೆಯೇ. ಪಡೆದ ಬಗ್ಗೆ ಕ್ರಮಸಂಖ್ಯೆ ನಮೂದಿಸುವುದು. | |
| 3 | ಸರಕಾರಿ ಆದೇಶ ಸಂಖ್ಯೆ: ಆಇ 01 ಟಿಎಎಫ್ಸಿ 2012 ಬೆಂಗಳೂರುದಿ: 23-07-2012ರ ಪ್ರಕಾರ ಸರಕಾರಿನೌಕರರ ವೈದ್ಯಕೀಯ ಚಿಕಿತ್ಸೆಯು ಪೂರ್ಣಗೊಂಡ ದಿನಾಂಕ ದಿಂದ 6 ತಿಂಗಳ ಒಳಗಾಗಿ ನಿಯಂತ್ರಣಾಧಿಕಾರಿಗಳಿಗೆ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 146ಎ (11)ರ ನಿಯಮಗಳನ್ವಯ ಪ್ರಸ್ತಾವನೆ  ಸಲ್ಲಿಸಲಾಗಿದೆಯೇ? | |
| | ಅರ್ಜಿದಾರರು ವೈದ್ಯಕೀಯ ವೆಚ್ಚಮಂಜೂರಾತಿಗಾಗಿ ಕೋರಿ ಅರ್ಜಿಸಲ್ಲಿಸಿದ ದಿನಾಂಕ ನಮೊದಿಸುವುದು. | |
| 4 | ಒಳರೋಗಿ ಚಿಕಿತ್ಸೆ ಪಡೆದು ಡಿಸ್ಚಾರ್ಜ ವರದಿ ಸಲ್ಲಿಸಲಾಗಿದೆಯೇ? | |
| 5 | ಹೊರರೋಗಿಯಾಗಿ ವೈದ್ಯಕೀಯ ತಪಾಸಣೆ ಪಡೆದುಕೊಂಡ ವೈದ್ಯರ ಸಲಹೆಚೀಟಿಗಳನ್ನು ಲಗತ್ತಿಸಲಾಗಿದೆಯೇ? | |
| 6 | ಚಿಕಿತ್ಸೆ ಪಡೆದ ದಿನಾಂಕ | |
| 7 | ರೋಗದ ಲಕ್ಷಣ ಮತ್ತು ಚಿಕಿತ್ಸೆಯ ವಿವರ. | |
| 8 | ಫಾರ್ಮ್ಬಿ " ದಲ್ಲಿರೋಗಿಯ ಚಿಕಿತ್ಸೆ ಪಡೆದ ಅವಧಿ ಮತ್ತು ವೈದ್ಯರ ಸಲಹೆ ಚೀಟಿಗಳನ್ನು ಲಗತ್ತಿಸುವುದು. | |
| 9 | ನಮೂನೆಫಾರ್ಮ್-ಬಿ ನಲ್ಲಿ ವೈದ್ಯರಿಂದ ದೃಢೀಕರಿಸಿ ಆಸ್ಪತ್ರೆ ಮೊಹರಿನೊಂದಿಗೆ ವೈದ್ಯಕೀಯ ವೆಚ್ಚದ ಬಿಲ್ಲಿನ ವಿವರವನ್ನು (ಕ್ರಮವಾದದಿನಾಂಕದೊಂದಿಗೆ ) ನಮೂದಿಸಿ ಮೇಲುಸಹಿ ಮಾಡತಕ್ಕದ್ದು, & ನಮೂನೆ ಸಿ ನಲ್ಲಿ ಡಿಕ್ಲರೇಷನ್ಮಾಡಿ ಸಲ್ಲಿಸುವುದು. | |

| | | |
|---|---|---|
| 10 | ನಮೂನೆ ಡಿ ಮತ್ತು ಇ  ಲಗತ್ತಿಸಿದೆಯೇ? (ಕಣ್ಣಿನ / ಕಿವಿಯ ಚಿಕಿತ್ಸೆಗೆ ಮಾತ್ರ ಸಂಬಂಧಿಸಿದ್ದರೆ) | |
| 11 | ಫಾರ್ಮಸಿ " ಸಂಬಮಧಿಸಿದ ನೌಕರರ ರುಜು ಪಡೆದು ಬಟವಡೆ ಅಧಿಕಾರಿಗಳ (ನೌಕರರ ರುಜುವಿಗೆ ಮತ್ತು 1 ರಿಂದ 20 ವರೆಗಿನ ದಾಖಲೆಗಳಿಗೆ ದೃಢೀಕರಿಸಲಾಗಿದೆಯೇ.? | |
| 12 | ವೈದ್ಯಕೀಯ ವೆಚ್ಚ ಮಂಜೂರು ಮಾಡಲು ಕೋರಿದ ಬಿಲ್ಲಿನ ಒಟ್ಟು ಮೊತ್ತ. | |
| | ಜಿಲ್ಲಾ ಶಸ್ತ್ರಚಿಕಿತ್ಸಕರು ರಿಮ್ಸ್ ಬೋಧಕ ಆಸ್ಪತ್ರೆ ರಾಯಚೂರು / ಸುವರ್ಣ ಆರೋಗ್ಯಟ್ರಸ್ಟ ಬೆಂಗಳೂರುರವರು ಪರಿಶೀಲನೆ ಮಾಡಿ ಅರ್ಹತಾ ಮೊತ್ತಕ್ಕೆ ಫಾರ್ಮ ಬಿ ಯಲ್ಲಿ ಮೇಲುರುಜು ಮಾಡಿ ಸಲ್ಲಿಸುವುದು. ಹಾಗೂ ಬಿಲ್ಲಿನ ಮೊತ್ತ ನಮೊದಿಸುವುದು | |
| 13 | ವೈದ್ಯಕೀಯ ಚಿಕಿತ್ಸೆ ಪಡೆದವರಿಗೂ ಮತ್ತು ನೌಕರರಿಗೂ ಇರುವ ಸಂಬಂಧ. | |
| 14 | ನಮೂನೆ ಎ ಯಲ್ಲಿ (ನೌಕರರ ವೇತನ ಮತ್ತು ರೋಗಿಯ ಸಂಬಂಧ) ಬಟವಡೆ ಅಧಿಕಾರಿಗಳು ದೃಢೀಕರಿಸಲಾಗಿದೆಯೇ? | |
| 15 | ಸರಕಾರಿ ನೌಕರರು ಅನಾರೋಗ್ಯದ ನಿಮಿತ್ತ ತಮ್ಮ ಮತ್ತು ಅವಲಂಭಿತರ ಚಿಕಿತ್ಸೆ ಪಡೆದ ಅವಧಿಯಲ್ಲಿ ರಜೆ ಪಡೆದ ಬಗ್ಗೆ ದಾಖಲೆಯನ್ನು ನಿಯಂತ್ರಣಾಧಿಕಾರಿಗಳು ದೃಢೀಕರಣದೊಂದಿಗೆ ಸಲ್ಲಿಸುವುದು. | |
| 16 | ಹೆಚ್.ಆರ್.ಎಂ.ಎಸ್. ಪ್ರತಿಲಗತ್ತಿಸುವುದು. (salari slip) | |
| 17 | ಚಿಕಿತ್ಸೆಯ ಮೊತ್ತ ಸಿಜಿಹೆಚ್.ಎಸ್ದರಗಳಿಗಿಂತ ಹೆಚ್ಚಗೆ ಪಡೆದಿದ್ದಲ್ಲಿ ವೇತನದಿಂದ ಸರ್ಕಾರಕ್ಕೆ ಭರಿಸಲು ಒಪ್ಪಿ ದೃಢೀಕರಣ ಸಲ್ಲಿಸುವ ಪ್ರಮಾಣಪತ್ರ ಸಲ್ಲಿಸಿದೆಯೇ? | |
| 18 | ವೈದ್ಯಕೀಯ ವೆಚ್ಚವನ್ನು ಯಾವದೇ ವಿಮಾಸಂಸ್ಥಯಿಂದ /ಇನ್ನಿತರ ಮೂಲಗಳಿಂದ ಪಡೆದಿರುವುದಿಲ್ಲವೆಂದು ದೃಢೀಕರಿಸಿ,  ಸಲ್ಲಿಸುವ ಪ್ರಮಾಣ ಪತ್ರ ಲಗತ್ತಿಸಿದೆಯೇ? | |

| | | |
|---|---|---|
| 19 | ಸದರಿ ಅಧಿಕಾರಿಯವರ ಪತಿ/ಪತ್ನಿಯರಲ್ಲಿ ಯಾರಾದರೂ ರಾಜ್ಯ/ಕೇಂದ್ರ ಸರಕಾರಿ ನೌಕರರು ಆಗಿದ್ದರೆ ಅವರಿಂದ ವೈದ್ಯಕೀಯ ವೆಚ್ಚದ ಬಗ್ಗೆ ಸಂಬಂಧಿಸಿದ ಕಛೇರಿಯಲ್ಲಿ ಮರುಪಾವತಿ ಪಡೆದ /ಪಡೆಯದೇ ಇರುವ ಪ್ರಮಾಣಪತ್ರ ಲಗತ್ತಿಸಿದೆಯೇ ? | |
| 20 | ಸರಕಾರಿ ನೌಕರರು ಅವರ ತಂದೆ ಅಥವಾ ತಾಯಿಯವರು ಕೇಂದ್ರ/ರಾಜ್ಯ ಸರಕಾರಿ ನೌಕರರು ಆಗಿದ್ದರೆ ವರದಿಯನ್ನು ಬಟವಡೆ ಅಧಿಕಾರಿಗಳು ದೃಢೀಕರಿಸಿಸಲ್ಲಿಸುವ ಪ್ರಮಾಣ ಪತ್ರ ಲಗತ್ತಿಸಿದೆಯೇ? | |

**ಸೂಚನೆಗಳು**

1) ಸದರಿ ಮೇಲಿನಂತೆ ದಾಖಲೆಗಳನ್ನು ತಯಾರಿಸಿ ಕ್ರಮವಾಗಿ ಜೋಡಿಸಿ ಅಧಿಕಾರಿಗಳ ದೃಢೀಕರಣದೊಂದಿಗೆ ಕಳುಹಿಸಲುತಿಳಿಸಿದೆ.(ಮೂಲ ಪ್ರತಿಗಳು ಮತ್ತು ಮೂಲಪ್ರತಿಗಳನ್ನು ದ್ವಿಪ್ರತಿಗಳ (ಝೇರಾಕ್ಸ್) ಮೇಲೆಸಂಬಂಧಪಟ್ಟಅಧಿಕಾರಿಗಳು ದೃಢೀಕರಣದೊಂದಿಗೆ ಸಲ್ಲಿಸತಕ್ಕದ್ದು)
2) ವೈದ್ಯಕೀಯ ವೆಚ್ಚ ಮಂಜೂರು ಮಾಡಲು ಕೋರಿದ ಆಸ್ಪತ್ರೆಯು ಕರ್ನಾಟಕಸರ್ಕಾರದಿಂದ ಅನುಮೋದಿಸಲ್ಪಟ್ಟ ಆಸ್ಪತ್ರೆಗಳ ಪಟ್ಟಿಯಲ್ಲಿ ಆಸ್ಪತ್ರೆ ಹೆಸರು ಇರದ ಸಂದರ್ಭದಲ್ಲಿ, ಸುವರ್ಣಆರೋಗ್ಯ ಸುರಕ್ಷಾ ಟ್ರಸ್ಟ್ ಬೆಂಗಳೂರುರವರಿಂದ ವೈದ್ಯಕೀಯ ವೆಚ್ಚದ ಅರ್ಹತಾ ಮೊತ್ತದ ನಿಗದಿಯಾದ ನಂತರ ಪ್ರಸ್ತಾವನೆಯನ್ನು ಸಲ್ಲಿಸಬೇಕು .(ಮೂಲಪ್ರತಿಗಳು ಮತ್ತು ಮೂಲ ಪ್ರತಿಗಳನ್ನು ದ್ವಿಪ್ರತಿಗಳ (2ಝೇರಾಕ್ಸ್) ಮೇಲೆ ಸಂಬಂಧಪಟ್ಟ ಅಧಿಕಾರಿಗಳು ದೃಢೀಕರಣದೊಂದಿಗೆ ಸಲ್ಲಿಸತಕ್ಕದ್ದು).

**ವಿಶೇಷಸೂಚನೆ**: ಈ ಮೇಲಿನಂತೆ ತಿಳಿಸಿದ ದಾಖಲೆಗಳನ್ನು ತಯಾರಿಸಿ ಕ್ರಮವಾಗಿ ಜೋಡಿಸಿ ಅಧಿಕಾರಿಗಳ ದೃಢೀಕರಣದೊಂದಿಗೆ ಕಳುಹಿಸದಿದ್ದಲ್ಲಿ ಸಂಪೂರ್ಣವಾಗಿ ಪ್ರಸ್ತಾವನೆಯನ್ನು ಯಥಾವತ್ತಾಗಿ ಹಿಂಬರಹ ಮಾಡಲಾಗುತ್ತದೆ.

.